ಇಮೋಜಿ ಭಾಷೆ



ಕರ್ಕಿ ಕೃಷ್ಣಮೂರ್ತಿ

# ಮುಟ್ಟಲಾರೆ 'ನಯ'

ನಯ–ವಿನಯವೂ ಒಂದು ಮುಖವಾಡವೇ. ಅದು ಮನುಷ್ಯನ ಸಾವಯುವ ಸ್ವಭಾವವೂ ಅಲ್ಲ. ಕಷ್ಟಪಟ್ಟೋ, ಅನಿವಾರ್ಯಕ್ಕೋ ರೂಢಿಸಿಕೊಂಡಿದ್ದು...

'ನಯ' ಅಂದ್ರೆ ಏನು ಅಂಕಲ್?

ಪ್ರೈಮರಿ ಓದುತ್ತಿರುವ ನನ್ನ ಪಕ್ಕದ ಮನೆ ಹುಡುಗನ ಪ್ರಶ್ನೆ. ಆ ವಯಸ್ಸಿನ ಎಲ್ಲ ಮಕ್ಕಳಿಗಿರುವಂತೆ ಅವನಿಗೂ ಚಿಟ್ಟೆಗಳೆಂದರೆ ಮಹಾ ಪ್ರೀತಿ. ಅಂಗಳದಲ್ಲೋ ತೋಟದಲ್ಲೋ ಕಾಣುವ ಅವುಗಳನ್ನು ಹಿಡಿಯಲು ಅವನು ನೆಗೆನೆಗೆಯುತ್ತ ಓಡುವುದನ್ನು ನೋಡುವುದೇ ಒಂದು ಮಜ. ಅವನಿಗೆ ಇಷ್ಟವಾಗುತ್ತದೆಂದು, ಬೇಂದ್ರೆ ತಾತನ 'ಪಾತರಗಿತ್ತಿ ಪಕ್ಕ' ಹಾಡನ್ನೊಮ್ಮೆ ಕೇಳಿಸಿದೆ ನಾನು. ಅದರಲ್ಲಿ ಬರುವ, 'ರೇಷಿಮೆ ಪಕ್ಕ ನಯ, ಮುಟ್ಟಲಾರೆ ಭಯ' ಎನ್ನುವ ಸಾಲನ್ನು ಗಮನಿಸಿದ ಅವನು, ಈ ಪ್ರಶ್ನೆ ಕೇಳಿದ್ದ.

ಕಾಕತಾಳೀಯವೆಂಬಂತೆ ಈ ನಯ–ಭಯದ ಕುರಿತು ಕೆಲ ದಿನಗಳ ಹಿಂದಷ್ಟೇ ನನ್ನ ಮಿತ್ರನೊಡನೆ ಚರ್ಚೆ ನಡೆದಿತ್ತು. 'ಭಯವಾದ ವಸ್ತು ನಯವಾದರೂ ನಂಬಬಾರದು' ಹಾಗೂ 'ನಯವಿದ್ದಲ್ಲಿ ಭಯವಿಲ್ಲ' ಎಂಬ ಎರಡು ವ್ಯತಿರಿಕ್ತ ಅರ್ಥ ನೀಡುವ ಗಾದೆಗಳು ಕಿಟೆಲ್ ನಿಘಂಟುವಿನ ಅಕ್ಕಪಕ್ಕದ ಪುಟದಲ್ಲಿಯೇ ಇವೆ. ಹಾಗಾದರೆ, ಇವೆರಡೂ ಗಾದೆಗಳಲ್ಲಿ ಹೇಳಿದ್ದು ಬೇರೆ ಬೇರೆ ನಯವೇ? ಎರಡೂ ಒಂದೇ ಆಗಿದ್ದರೂ ಅದಕ್ಕೆ ಬೇರೆ ಬೇರೆ ಅರ್ಥವಿದೆಯೇ? ಅಥವಾ ಒಂದೇ ಅರ್ಥದ ನಯಕ್ಕೆ ಅನೇಕ ಸಾಧ್ಯತೆಗಳಿವೆಯೇ?

'ನಯ ವಿನಯ ಕಲಿತುಕೋ' ಎಂಬುದನ್ನು ಚಿಕ್ಕಂದಿನಿಂದಲೂ ನಮಗೆ ಎಲ್ಲ ಹಿರಿಯರೂ ಹೇಳಿಕೊಟ್ಟಿದ್ದೇ ಆಗಿದೆ. ಅಂದಮೇಲೆ ಈ ನಯವೆನ್ನುವುದು ಸರ್ವಸಮ್ಮತವೇ ಇರಬೇಕು ಎಂದುಕೊಳ್ಳುತ್ತಿರುವಂತೆಯೇ, ನನ್ನ ಮೆಚ್ಚಿನ ಕಥೆ ಹಾಗೂ ಕವಿತೆಯೊಂದು ನೆನಪಿಗೆ ಬರುತ್ತಿದೆ.

ಮೊದಲನೆಯದು ಎಂಟನ್ ಚೆಕೋವ್‌ನ 'ಶೂಮೇಕರ್ ಅಂಡ್ ಡೆವಿಲ್' ಎನ್ನುವ ಕಥೆ. ಅದರಲ್ಲಿಯ ಕಥಾನಾಯಕನೊಬ್ಬ ಚಮ್ಮಾರ. ಕಡುಬಡವನಾದ ಆತನಿಗೆ ಸಿರಿವಂತಿಕೆಯ ಹಪಹಪಿ. ಹೀಗೆ ಅಚಾನಕ್ ಆಗಿ, ದೆವ್ವವೊಂದು ವರ ನೀಡಿ ಆತ ಸಾಹುಕಾರನಾಗಿ ಬದಲಾಗಿಬಿಡುತ್ತಾನೆ. ಬೆಲೆಬಾಳುವ ಸೂಟು ಬೂಟು ಧರಿಸಿ ರಸ್ತೆಯಲ್ಲಿ ನಡೆದು ಹೋಗುತ್ತಿರುವಾಗ ಪುಳಕವೇರಿ ಆತ ಜೋರಾಗಿ ಹಾಡಲು ಶುರುಮಾಡಿದರೆ, ಎಲ್ಲಿಂದಲೋ ಓಡಿಬಂದ ಪೊಲೀಸನೊಬ್ಬ 'ನೀನೀಗ ಚಪ್ಪಲಿ